ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ (ಅಫ್ಜಲಪುರ) : ಸನ್ಮಾನ್ಯ ಅಧ್ಯಕ್ಷರೆ, ಅಫ್ಜಲಪುರ ಪಟ್ಟಣದ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ದೊರೆಯುತ್ತಿಲ್ಲ. ಪಟ್ಟಣದ ಒಳಚರಂಡಿ ನೀರು ಸಮೀಪವಿರುವ ಹೊಳೆಗೆ ಸೇರುತ್ತಿದೆ. Borewell ಇದ್ದು ಅದರ ಮುಖಾಂತರ ಪಟ್ಟಣಕ್ಕೆ ನೀರು ಸರಬರಾಜು ಆಗುತ್ತಿದ್ದು, ನೀರು ಶುದ್ಧೀಕರಣ ಘಟಕ ಇಲ್ಲದಿರುವುದರಿಂದ ಪೂರ್ತಿಯಾಗಿ ಒಳಚರಂಡಿ ನೀರು ಕುಡಿಯುವ ನೀರಿಗೆ ಸೇರಿಕೊಂಡು ಸಾರ್ವಜನಿಕರ ಆರೋಗ್ಯಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದಅಫ್ಜಲಪುರದ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ನಿಟ್ಟಿನಲ್ಲಿ ನೀರು ಶುದ್ಧೀಕರಣ ಘಟಕ ಸ್ಥಾಪಿಸಲು ವಿಶೇಷ ಅನುದಾನ ಮಂಜೂರು ಮಾಡುವ ವಿಷಯವಾಗಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರುತ್ತಿದ್ದೇನೆ. ಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು : ಉತ್ತರ ಕೊಟ್ಟಿದ್ದಾರಲ್ಲವೇ?

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ : ಉತ್ತರ ಕೊಟ್ಟಿಲ್ಲ. ಮಾಡುತ್ತೇವೆಂದು ಹೇಳಿದರೆ ಆಯಿತು.

ಶ್ರೀ ಎಸ್.ಸುರೇ:ಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಒಳಚರಂಡಿ ನೀರು ಕುಡಿಯುವ ನೀರಿನ ಜೊತೆ ಸೇರಿಕೊಂಡು ಮಲಿನವಾ–ಗುತ್ತಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಶುದ್ಧೀಕರಣ ಘಟಕ ಸ್ಥಾಪಿಸಲು ನಾವು ಕ್ರಮ ತೆಗೆದುಕೊಳುತ್ತೇವೆ.

ಅಧ್ಯಕ್ಷರು : ಶ್ರೀಕಾಂತ ಕುಲಕರ್ಣಿಯವರು.

3) ವಿಷಯ : ಜಮಖಂಡಿ ತಾಲ್ಲೂಕಿನ ಸಾವಳಗಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.

ಶ್ರೀ ಶ್ರೀಕಾಂತ ಸುಬ್ಬರಾವ್ ಕುಲಕರ್ಣಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ನಾನು ಈ ಶೂನ್ಯ ವೇಳೆಯಲ್ಲಿ ಒಂದು ವಿಶೇಷವಾದ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಬಯಸುತ್ತೇನೆ. ಕರ್ನಾಟಕ ಸರ್ಕಾರ ಒಂದು ವಿಶೇಷವಾದ ಪರಿಣಾಮಕಾರಿ ಆದೇಶವನ್ನು ನೀಡಿ, 43 ಹೊಸ ತಾಲ್ಲೂಕುಗಳನ್ನು ಘೋಷಣೆ

ಮಾಡಿದ ಸರಿಯಾದಂತಹ ಪರಿಣಾಮಕಾರಿ ಆಡಳಿತಕ್ಕಾಗಿ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಹೊಸದಾಗಿ 43 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಕ್ಕಾಗಿ ಈ ಸರ್ಕಾರಕ್ಕೆ ಅಭಿನಂದನೆಗಳು. ಆದರೆ ಈ ಸಂದರ್ಭದಲ್ಲಿ ಜಮಖಂಡಿ ತಾಲ್ಲೂಕಿನ ಸಾವಳಗಿ ಕೂಡಾ ತಾಲ್ಲೂಕು ಕೇಂದ್ರ ಆಗಬೇಕೆಂದು ಹತ್ತಾರು ವರ್ಷಗಳಿಂದ ಬೇಡಿಕೆ, ಅನೇಕ ಹೋರಾಟಗಳು, ಧರಣಿ, ಸತ್ಯಾಗ್ರಹಗಳು, ರಸ್ತೆ ರೋಕೋ ಇತ್ಯಾದಿ ನಡೆದು ಸರ್ಕಾರದ ಗಮನವನ್ನು ಸೆಳೆಯಲಾಗಿತ್ತು. ಆದರೆ ಇವತ್ತು ಆ ಜಮಖಂಡಿ ತಾಲ್ಲೂಕಿನ ಮಧ್ಯದಲ್ಲಿ ಹರಿಯುವಂಥ ಕೃಷ್ಣಾ ನದಿಗೆ 519.06 ಮೀಟರ್ ಹಿನ್ನೀರು ಮಾತ್ರ ಬಂದಿದೆ. ಭವಿಷ್ಯದಲ್ಲಿ ಅದು 524 ಮೀಟರ್ ಎತ್ತರದ ನೀರು ಬಂದ ನಂತರ ಜಮಖಂಡಿ ತಾಲ್ಲೂಕು ಪೂರ್ತಿ bifurcate ಆಗಿ ಈ ಸಾವಳಗಿ ಭಾಗಕ್ಕೂ ಮತ್ತು ಜಮಖಂಡಿ ಭಾಗಕ್ಕೂ ಸಂಪರ್ಕ ಸಂಪೂರ್ಣ ತಪ್ಪಿ ಹೋಗುತ್ತದೆ.

ಅಧ್ಯಕ್ಷರು : ಈಗ ಶೂನ್ಯವೇಳೆ, ನೀವು ಎಲ್ಲವನ್ನೂ detail ಆಗಿ ಹೇಳುವುದಕ್ಕೆ ಅವಕಾಶವಿಲ್ಲ. Please....

ಶ್ರೀ ಶ್ರೀಕಾಂತ ಸುಬ್ಬರಾವ್ ಕುಲಕರ್ಣಿ : ಹೀಗಾಗಿ ಸನ್ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುವುದೇನೆಂದರೆ 43 ತಾಲ್ಲೂಕಿನ ಜೊತೆಗೆ ಸಾವಳಗಿಯನ್ನು 44ನೇ ತಾಲ್ಲೂಕು ಎಂದು ಹೇಳಿ ಘೋಷಣೆ ಮಾಡಬೇಕು. ಇದುಸನ್ಮಾನ್ಯ ಬಿ.ಡಿ.ಜತ್ತಿಯವರು ಹುಟ್ಟಿದ ಊರು, Infosys ನ ಪ್ರವರ್ತಕ ಸುಧಾಮೂರ್ತಿಯವರ ತವರೂರು. ಹೀಗಾಗಿ ವಿಶೇಷವಾಗಿ ಜನರಿಗೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಲ್ಲಿ ತಾಲ್ಲೂಕೆಂದು ಘೋಷಿಸಬೇಕು .

ಅಧ್ಯಕ್ಷರು : ಆಯಿತು, ಈಗ ನಿಮಗೆ ತಾಲ್ಲೂಕು ಬೇಕು ಎಂದು ಕೇಳಿದ್ದೀರಿ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ಇದು ಶೂನ್ಯವೇಳೆಯಲ್ಲಿ ಬರುವುದಿಲ್ಲ. ಆದರೂ ಅವಕಾಶ ಕೊಟ್ಟಿದ್ದೇನೆ.

ಶ್ರೀ ಶ್ರೀಕಾಂತ ಸುಬ್ಬರಾವ್ ಕುಲಕರ್ಣಿ : ಒಂದೇ ನಿಮಿಷ ಅಧ್ಯಕ್ಷರೆ, ಮುಗಿಸುತ್ತೇನೆ.

ಅಧ್ಯಕ್ಷರು : ಮತ್ತೆ ಮತ್ತೆ ಹೇಳುತ್ತಿದ್ದರೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಶ್ರೀಕಾಂತ ಸುಬ್ಬರಾವ್ ಕುಲಕರ್ಣಿ : ಪಕ್ಕದ ಅಥಣಿ ತಾಲ್ಲೂಕಿನ 16 ಗ್ರಾಮ ಪಂಚಾಯಿತಿಗಳು ಈಗಾಗಲೇ ಠರಾವನ್ನು ಮಾಡಿ, ನಿರ್ಧಾರ ಮಾಡಿ ಸಾವಳಗಿ ತಾಲ್ಲೂಕು ಕೇಂದ್ರಕ್ಕೆ ಸಮ್ಮತಿಯನ್ನು ಕೊಟ್ಟಿದ್ದಾರೆ. ಹೀಗಾಗಿ ಆ ಭಾಗಕ್ಕೆ

ಮಾನ್ಯ ಉಪಮುಖ್ಯಮಂತ್ರಿಗಳು ಸ್ಪಂದನೆ ಮಾಡಿ ಅದನ್ನು ಹೊಸ ತಾಲ್ಲೂಕು ಎಂದು ಘೋಷಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಶ್ರೀ ಶ್ರೀಕಾಂತ ಸುಬ್ಬರಾವ್ ಕುಲಕರ್ಣಿಯವರು ಪ್ರಸ್ತಾಪಿಸಿದ ವಿಷಯ ಸಮಂಜಸವಾಗಿದೆ. ನಾಳೆ ಆಲಮಟ್ಟಿ ಜಲಾಶಯ ತುಂಬಿದರೆ ಸಾವಳಗಿ ಸರ್ಕಲ್ ಮತ್ತು ಜಮಖಂಡಿ ತಾಲ್ಲೂಕು ಪ್ರತ್ಯೇಕವಾಗುತ್ತದೆ. 12 ತಿಂಗಳು ನದಿಯೊಳಗೆ ನೀರು ಇರುತ್ತದೆ. ಅದಕ್ಕಾಗಿ ಆಡಳಿತ ಸುಗಮವಾಗಿ ನಡೆಯುವುದಕ್ಕೆ ಸಾವಳಗಿ ತಾಲ್ಲೂಕು ಆಗುವುದು ಯೋಗ್ಯವಿದೆ. ಆದ್ದರಿಂದ ದಯವಿಟ್ಟು ಉಪಮುಖ್ಯಮಂತ್ರಿಗಳು ಘೋಷಣೆ ಮಾಡಬೇಕು.

4) ವಿಷಯ : ತೇರದಾಳ ನಗರವನ್ನು ತಾಲ್ಲೂಕಾಗಿ ಘೋಷಣೆ ಮಾಡುವ ಬಗ್ಗೆ.

ಶ್ರೀ ಸಿದ್ದು ಸವದಿ (ತೇರದಾಳ) (ಸರ್ಕಾರದ ಮುಖ್ಯ ಸಚೇತಕರು) : ಮಾನ್ಯ ಅಧ್ಯಕ್ಷರೆ, ಮೊದಲ ಬಾರಿಗೆ ನಮ್ಮ ಸರ್ಕಾರ 43 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಕ್ಕಾಗಿ ಅಭಿನಂದನೆಗಳನ್ನು ಹೇಳುತ್ತಾ, ನನ್ನ ಕ್ಷೇತ್ರದಲ್ಲಿ ತೇರದಾಳ ಎನ್ನುವಂಥ ನಗರ ಬಹಳ ಐತಿಹಾಸಿಕ ಹಿನ್ನಲೆ ಉಳ್ಳಂಥ ನಗರವಾಗಿರುವುದರಿಂದ ಮತ್ತು ಸಾಂಗ್ಲಿ ಸಂಸ್ಥಾನದಲ್ಲಿ ತಾಲ್ಲೂಕು ಆಗಿರುವಂಥ ಹಿರಿಮೆ ಆ ನಗರಕ್ಕಿರುವ ಕಾರಣಕ್ಕಾಗಿ, ಈಗಾಗಲೇ ರಾಜ್ಯದಲ್ಲಿ ಒಂದೊಂದು ವಿಧಾನಸಭೆ ಕ್ಷೇತ್ರದಲ್ಲಿ 3 ತಾಲ್ಲೂಕುಗಳನ್ನು ಘೋಷಣೆ ಮಾಡಿರುವ ಉದಾಹರಣೆ ಇರುವುದರಿಂದ, ತೇರದಾಳವೂ ಸಹಿತ ಎಲ್ಲ ದೃಷ್ಟಿಯಿಂದಲೂ ಅರ್ಹತೆ ಹೊಂದಿರುವಂತಹ ನಗರವಾಗಿರುವುದರಿಂದ, 2011 ನೇ census.. ಪ್ರಕಾರ ಸುಮಾರು 50,000 ಜನಸಂಖ್ಯೆ ಹೊಂದಿರುವ ನಗರವಾಗಿರುವುದರಿಂದ, ಸುತ್ತಲೂ ಇಡೀ ತಾಲ್ಲೂಕು ಜಿಲ್ಲೆಯಲ್ಲಿ ಹೆಚ್ಚಿನ ಫಲವತ್ತಾದ ಕಂದಾಯ ಜಮೀನನ್ನು ಹೊಂದಿರುವ ನಗರ ತೇರದಾಳ ನಗರವಾಗಿದೆ. ಅಲ್ಲದೆ ಎಲ್ಲಾ ಸವಲತ್ತುಗಳನ್ನು ಹೊಂದಿರುವ ನಗರವಾಗಿರುವುದರಿಂದ, ತೇರದಾಳವನ್ನೂ ಒಂದು ತಾಲ್ಲೂಕು ಎಂದು ಘೋಷಣೆ ಮಾಡಬೇಕೆಂದು ನಾನು ವಿನಂತಿ